ಶ್ರಮದಿಂದಲೇ ಆದದ್ದು ಅಂತ ನನ್ನ ನಂಬಿಕೆ.

◆ **ಕಾವ್ಯದ ಆಸಕ್ತಿ ಹೇಗೆ ಶುರುವಾಯ್ತು?**

ನಾನು ತುಂಬಾ ಚಿಕ್ಕವಳಿದ್ದಾಗ ನಮ್ಮನ್ನು ಮಲಗಿಸಲು ಅಜ್ಜಿ ಶೋಕ ವ್ಯಕ್ತಪಡಿಸುವ ಜಾನಪದ ಹಾಡುಗಳನ್ನು ಹಾಡುತ್ತಿದ್ದಳು. ಆಕೆ ಆಗಾಗ ಧಾರ್ಮಿಕ ಪ್ರಾರ್ಥನೆಗಳನ್ನೂ ಗುನುಗುತ್ತಿದ್ದಳು. ಅವುಗಳನ್ನು ಕೇಳುತ್ತಾ ನಾನು ಬೆಳೆದೆ. ನನ್ನ ತಾಯಿ ಕೂಡ ಅಸಾಧಾರಣ ಜಾನಪದ ಹಾಡುಗಾರ್ತಿ. ಆಕೆ ಮದುವೆ ಸಂದರ್ಭದಲ್ಲಿ ಹೆಂಗಸರು ವರನ ಮನೆಯಲ್ಲಿ ನರ್ತಿಸುತ್ತಾ ಹಾಡುವ 'Ratyouli' ಹಾಡುಗಳನ್ನು ಸೊಗಸಾಗಿ ಹಾಡುತ್ತಿದ್ದಳು. ಹೊಲಗದ್ದೆಗಳಲ್ಲಿ ಕೆಲಸ ಮಾಡುವಾಗ, ಭತ್ತ ನಾಟಿ ಮಾಡುವಾಗ, ಜೋಳದ ಕೊಯ್ಲು ಮಾಡುವಾಗ ಮತ್ತು ಮಹಿಳೆಯರ ತೀಜ್ ಹಬ್ಬದಲ್ಲಿ ಅವಳು ಹಾಡುತ್ತಿದ್ದ ಹಾಡುಗಳು ತಮ್ಮ ಪ್ರಾಸ, ಲಯ, ಮಾಧುರ್ಯದೊಡನೆ ನನ್ನ ನೆನಪಿನ ಪಟಲದಲ್ಲಿ ಅಚ್ಚಿನಂತೆ ಉಳಿದಿವೆ. ನಾನು ಬೆಳೆದಂತೆ, ನನ್ನ ಅಕ್ಕಂದಿರು ತಮ್ಮ ನೋಟ್ ಪುಸ್ತಕಗಳಲ್ಲಿ ಬರೆದುಕೊಂಡ ಹಾಡು ಮತ್ತು ಕವಿತೆಗಳನ್ನು ನನ್ನ ಮುಂದೆ ಓದಿ ಹೇಳುತ್ತಿದ್ದರು. ಆ ಪದ್ಯಗಳಲ್ಲಿ ಕೆಲವು ಮಹಿಳೆಯರ ಸುತ್ತ ಇದ್ದರೆ, ಇನ್ನು ಕೆಲವು ನಿರ್ದಿಷ್ಟ ಘಟನೆಗಳ ಮೇಲೆ ಆಧಾರಿತವಾಗಿರುತ್ತಿದ್ದವು. ಕಠ್ಮಂಡುವಿನಲ್ಲಿ ಬ್ಯಾಚುಲರ್ ಡಿಗ್ರಿ ಓದುತ್ತಿದ್ದ ನನ್ನ ಹಿರಿಯಣ್ಣ ಮನೆಗೆ ಸಾಹಿತ್ಯ ಪುಸ್ತಕಗಳನ್ನು ಅದರಲ್ಲೂ ಕಮ್ಯುನಿಸ್ಟ್ ಗ್ರಂಥಗಳನ್ನು ತರುತ್ತಿದ್ದ. ನಾನವುಗಳನ್ನು ಓದುತ್ತಿದ್ದೆ. ಅಚ್ಚರಿಯೆಂದರೆ ನಮ್ಮಪ್ಪನೂ ಒಂದಷ್ಟು ಹಿಂದಿ ಪುಸ್ತಕಗಳು ಮತ್ತು ಮ್ಯಾಗಜಿನ್‌ಗಳನ್ನು ಸಂಗ್ರಹಿಸಿಟ್ಟಿದ್ದರು. ಬಹುಶಃ ಈ ಎಲ್ಲಾ ಪ್ರಭಾವದಿಂದ ಕಾವ್ಯ ಮತ್ತು ಜಾನಪದ ಹಾಡುಗಳ ಮೇಲೆ ಎಳೆ ವಯಸ್ಸಿನಲ್ಲೇ ನನ್ನಲ್ಲಿ ಆಸಕ್ತಿ ಬೆಳೆದಿರಬಹುದು.

◆ **ನೀವು ಪತ್ರಿಕೆಯಲ್ಲಿ ಸಮಕಾಲೀನ ವಿಷಯಗಳ ಬಗ್ಗೆ ಕಾಲಂ ಬರೀತೀರಿ. ವೃತ್ತಿಯಿಂದ ಲಾಯರ್ ಆಗಿರುವವರು. ವಕಾಲತ್ತು ಮಾಡಲು ಲಾಜಿಕ್ ಬೇಕು ಆದರೆ ಕವಿತೆಗೆ ಯಾವುದೇ ತರ್ಕ ಇರೋದಿಲ್ಲ. ನನ್ನ ಪ್ರಶ್ನೆ ಏನೆಂದರೆ ಯಾವ ವಿಷಯ, ಘಟನೆ ಅಥವಾ ಸಂಗತಿ ನಿಮ್ಮಲ್ಲಿ ಕವಿತೆಯಾಗಿ ಮೂಡುತ್ತೆ? ಸ್ವಲ್ಪ ವಿವರಿಸಬಹುದಾ?**

ಸುಮಾರು ಒಂದೂವರೆ ದಶಕಗಳ ಕಾಲ ನಾನು ಒಂದು ಕಾಲೇಜಿನಲ್ಲಿ ಪಾಠ ಮಾಡುತ್ತಿದ್ದೆ. ಹಾಗೆಯೇ ನೇಪಾಳದ ಮುಂಚೂಣಿಯ ದಿನಪತ್ರಿಕೆ 'ಕಾಂತಿಪುರ' ಮತ್ತು ಇತರ ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುತ್ತಿದ್ದೆ. ಜೊತೆ ಜೊತೆಗೆ ಸಾಹಿತ್ಯಕ ಬರವಣಿಗೆಗಳನ್ನು, ಟೀಚಿಂಗ್ ಮತ್ತು ಪತ್ರಿಕೋದ್ಯಮದ ಕಡೆಗೂ ಗಮನ ಹರಿಸಿದ್ದೆ. 'ಕಾಂತಿಪುರ'ದಲ್ಲಿ 'ಸಮಾವೇತಾ' ಎಂಬ ಕಾಲಂ ಬರೆಯುವಾಗ ಸಮಕಾಲೀನ ರಾಜಕೀಯ ಇಶ್ಯುಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಟ್ಟೆ ಮತ್ತು ಮಹಿಳೆಯರ ಮೇಲಿನ ಹಿಂಸೆಯ ಬಗ್ಗೆ ತೀಕ್ಷ್ಣ ವಿಮರ್ಶಾ ಬರಹಗಳನ್ನು ಬರೆದೆ. ನೇಪಾಳದಲ್ಲಿ ಈಗ ಅಸ್ತಿತ್ವದಲ್ಲಿರುವ ಕಾನೂನುಗಳನ್ನು ಮಹಿಳಾ ಸ್ನೇಹಿ ಎಂದು ಪ್ರಚಾರ ಮಾಡಲಾಗುತ್ತಿದೆ. ಆದರೆ ಪ್ರಾಯೋಗಿಕವಾಗಿ ಮಹಿಳೆಯರಿಗೆ ಆಸ್ತಿಯಲ್ಲಿ ಸಮಾನ ಹಕ್ಕು ಇಲ್ಲ. ಪೌರತ್ವ ಕಾನೂನುಗಳಲ್ಲೂ ಇದೇ ಥರದ ಅಸಮಾನತೆ ಇದೆ. ಮದುವೆಯ ನಂತರ ನೇಪಾಳಿ ಮಗ ಮತ್ತು ಮಗಳ ಸ್ಥಾನಮಾನದಲ್ಲಿ ಮಹತ್ತರವಾದ ಅಸಮಾನತೆ ಕಾಣಬಹುದು. ಅತ್ಯಾಚಾರ ವಿರುದ್ಧದ ಕಾನೂನುಗಳಲ್ಲೂ ಕೂಡ ಸಾಕಷ್ಟು ದೋಷಗಳಿವೆ! ಈ ಇಶ್ಯೂಗಳ ವಿರುದ್ಧ ನಾವು ಕೋರ್ಟ್ ರೂಮ್‌ಗಳಿಂದ ಪತ್ರಿಕೆಗಳ ತನಕ ಮತ್ತು ಬೀದಿ ಕಾವ್ಯಗಳ ಮೂಲಕ ಹೋರಾಡುತ್ತಿದ್ದೇವೆ. ಯಾಕೆಂದರೆ ಪ್ರತಿಭಟಿಸುವುದರ ಹೊರತು ಪರ್ಯಾಯ ದಾರಿ ನಮಗಿಲ್ಲ. ಕಾವ್ಯ ನನ್ನ ಮೊದಲ ಆತ್ಮೀಯ ಸಂಗಾತಿ. ನನ್ನ ಬದುಕಿನ ಅನುಭವಗಳ ಸಾರವನ್ನು ಕಾವ್ಯದ ಮೂಲಕ ಹಿಡಿದಿಡುವುದು ಎಂದರೆ ನನಗಿಷ್ಟ, ಮತ್ತೆ ಈ ಪಯಣ ನಿರಂತರವಾಗಿ ಸಾಗುತ್ತದೆ.

◆ **ನೀವೊಬ್ಬ ಕಾವ್ಯದ ಗಂಭೀರ ಪ್ರಾಕ್ಟೀಶನರ್ ಆಗಿ, ಸಮಕಾಲೀನ ನೇಪಾಳಿ ಕಾವ್ಯದ ಒಲವು ನಿಲುವುಗಳೇನು, ಈಗದು ಯಾವ ಹಾದಿ ಹಿಡಿದಿದೆ ಅನ್ಸುತ್ತೆ? ಅದನ್ನೇನಾದರೂ ಒಂದು ನಿರ್ದಿಷ್ಟ ಪಂಥ ಅಥವಾ ಹೆಸರಿನಿಂದ ವಿಮರ್ಶಕರು ಗುರುತಿಸುತ್ತಾರಾ?**

ಆಧುನಿಕ ನೇಪಾಳಿ ಕಾವ್ಯದ ಇತಿಹಾಸ ದೀರ್ಘಕಾಲದ್ದಲ್ಲದಿದ್ದರೂ, ನೇಪಾಳಿ ಕಾವ್ಯದಲ್ಲಿ ಆಧುನಿಕತೆಯು ಸುಮಾರು 1950ರಲ್ಲಿ ಆರಂಭವಾಯಿತು. ಇದು 2007ರ ಪ್ರಜಾಪ್ರಭುತ್ವ ಕ್ರಾಂತಿಗೆ ಸಮಕಾಲೀನವಾಗಿದೆ. ತನ್ನ ರಚನಾತ್ಮಕ ಹಂತದಲ್ಲಿ ನೇಪಾಳಿ ಸಾಹಿತ್ಯವು ವಿದೇಶಿ ಸಾಹಿತ್ಯ